ಕೈಯಲ್ಲಿನ ಕಾಗದವನ್ನು ಬಿಡಿಸುತ್ತಿದ್ದ ನಾನು, ಅವಳ ಕಡೆಗೆ ಕಣ್ಣುಬಿಟ್ಟು ನೋಡಿದೆ. ಭುಜದ ಮೇಲಿನ ಸೆರಗನ್ನು ಸರಿಮಾಡಿಕೊಳ್ಳುತ್ತಿದ್ದಳು. ಇದ್ಯಾಕೋ ಹೊಸದು, ಎನಿಸಿತು. ಮಧು — ನನಗೀಗ ಪರಿಚಯವಾಗಿ ಆರು ವರ್ಷಗಳೇ ಸಂದಿವೆ. ತುಂಬಾ ಆತ್ಮೀಯತೆಯಿಂದ ವರ್ತಿಸುತ್ತ ನಾಲ್ಕು ವರ್ಷಗಳಿಗಿಂತ ಹೆಚ್ಚಾಗಿದೆಯೇನೋ. ಎಂದೂ ಅವಳು ನನ್ನೆದುರಿಗೆ ಸಂಕೋಚ ಪ್ರದರ್ಶಿಸಿದವಳಲ್ಲ. ಇವೊತ್ತೇ ಯಾಕೆ ಹೀಗೆ?– ಎಂದು ಕಾಡತೊಡಗಿತು.

ಈಗ ಸಂಭಾಷಣೆ ಮುಂದುವರಿಸದೆ ಗತ್ಯಂತರವಿಲ್ಲ. ಕೇಳಿದೆ–

'ಆರು ಗಂಟೆಗೆ ಕ್ಯಾಷ್ ಬಾಕ್ಸ್‌ನ ಬೀಗದ ಕೈ ಅವನ ಮುಖದ ಮೇಲೆ ಬಿಸಾಕಿ ಬಂದಿದ್ದರೆ ಆಗುತ್ತಿರಲಿಲ್ಲೇನು?'

'ಅದ್ಹ್ಯಾಗೆ ಆಗುತ್ತೆ ಅಂದರೆ?'

'ಹ್ಯಾಗೆ ಆಗುತ್ತೆ, ಅಂದರೆ? ಸಾಧ್ಯ ಮಾಡಿಕೋಬೇಕು.'

'ನಿಮ್ಮಂತಹವರಿಗೆ ಎಲ್ಲವೂ ಸಾಧ್ಯ. ನಾನು ಆ ತರಹ ಮಾಡಲಿಕ್ಕೆ ಆಗುತ್ತೇನು? ಆಫೀಸ್‌ನಲ್ಲಿರೋರು ಒಬ್ಬೊಬ್ಬರೂ ಒಂದೊಂದು ನೆವ ಹೇಳಿ ಆಫೀಸಿನಿಂದ ಕಾಲು ಕೀಳೋರೇ: ನನ್ನ ಫ್ರೆಂಡ್‌ಗೆ ಎಂಗೇಜ್‌ಮೆಂಟ್ ಕೊಟ್ಟಿದ್ದೆ, ಹೊತ್ತಾಗುತ್ತೆ, ಬರ್‍ತೀನಿ ಸಾರ್ ಅಂತಲೋ, ಮಗೂನ ಆಸ್ಪತ್ರೆಗೆ ಕರೆದುಕೊಂಡು ಹೋಗಬೇಕಿದೆ, ದಯವಿಟ್ಟು ಹೋಗಲಿಕ್ಕೆ ಅಪ್ಪಣೆ ಕೊಡ್ತೀರಾ ಅಂತಲೋ ಹೊರಗೆ ಕಾಲಿಡೋರೆ. ಅದರಲ್ಲೂ ಬೇಕಂತ ನನ್ನ ಕಡೆಗೆ ತಮ್ಮ ಅಪಹಾಸ್ಯದ ದೃಷ್ಟಿ ಬೀರ್‍ತಾ...'

'ನೀನು ಮಾತ್ರ...' ಸಿಗರೇಟು ಬಾಯಲ್ಲಿಟ್ಟು ಕಡ್ಡಿಗಾಗಿ ಹುಡುಕುತ್ತಾ ಹಾಗೆಯೇ ಮುಂದುವರಿಸುತ್ತೇನೆ– 'ಸುಮ್ಮನೆ ಕೂತಿರುತೀಯ. ಅವರಿಗೂ ಅದೇ ಬೇಕು.'

'ಅಹಹಹ! ನಿಮ್ಮ ಮಾತು ಕೇಳಿಬಿಟ್ಟರಂತೂ ಸರೀಹೋಯ್ತು! ನಾನು ಸುಮ್ಮನೆ ಕೂತಿರತೀನಿ!– ಅವಳ ಕಣ್ಣಲ್ಲಿ ಒಮ್ಮೊಮ್ಮೆ ಕಂಡುಬರುವ ಮಿಂಚು ಹೊಳೆದಂತಾಯಿತು. ಅವಳು ಮುಂದುವರಿಸಿದಳು– 'ನಾನ್ಯಾಕೆ ಸುಮ್ಮನೆ ಕೂಡಲಿ? ಅದಲ್ಲ, ನಿಜವಾದ ವಿಷಯ. ಅಲ್ಲಿ ಆಗೋದು ಇಷ್ಟೇನೆ– ನನಗೆ ಏನಾದರೂ ಸ್ವಂತ ಕೆಲಸ ಇದೆ ಅಂತ ಗೊತ್ತಾದರಂತೂ ಆ ಮುದುಕ ಬೇಕೆಂತಲೇ ತಡಮಾಡ್ತಾನೆ. ಸುಮ್ಮಸುಮ್ಮನೆ ನನ್ನ ಮೇಲೆ ಉರಿದುಬೀಳ್ತಾನೆ.'

ಅವಳ ಕೊನೆಯ ಮಾತುಗಳು ನನ್ನ ಕಿವಿಯ ಮೇಲೆ ಬೀಳುತ್ತಿರುವಂತೆ ಪಕ್ಕಕ್ಕೆ ಎತ್ತಿಟ್ಟಿದ್ದ ಕಾಗದವನ್ನು ಮತ್ತೊಮ್ಮೆ ಕೈಗೆ ತೆಗೆದುಕೊಂಡು ಕಣ್ಣಾಡಿಸುತ್ತೇನೆ. ತಾಯಿ ಮಗಳಿಗೆ ಬರೆದ ಆ ಪತ್ರದಲ್ಲಿ ಇದ್ದ ಮುಖ್ಯ ವಿಷಯ ಇಷ್ಟೇ:

'ನಿಮ್ಮ ತಂದೆ ಈ ದಿನ ಬೆಳಗಿನ ಝೂವದ ಗಾಡಿಗೆ ಅನಿರೀಕ್ಷಿತವಾಗಿ ಹಿಂದಿರುಗಿ ಬಂದಿದಾರೆ. ಕಣ್ಣಲ್ಲಿ ನೋಡುವ ಹಾಗಿಲ್ಲ. ದುಡ್ಡು ಮಾತ್ರ ಸಾಕಷ್ಟು ಮಾಡಿರೋ ಹಾಗಿದೆ. ನಿನ್ನನ್ನ ನೋಡಬೇಕೂಂತ ತುಂಬಾ ಹಂಬಲಿಸ್ತಾ ಇದಾರೆ. ವಾರದ ಕೊನೆಗೆ ಬಿಡುವು ಮಾಡಿಕೊಂಡು ಬಾ. ಸಾಧ್ಯವಾದರೆ.'

ಎರಡು ಸಾರಿ ಅದನ್ನು ಓದಿದರೂ ತೃಪ್ತಿಯಾಗಲಿಲ್ಲ. ತಾರೀಖನ್ನೊಮ್ಮೆ ಪರೀಕ್ಷಿಸಿದೆ. ನೆನ್ನೆಯದೇ ತಾರೀಖು. ಮಧುಳ ಮುಖ ನೋಡಿದೆ. ಅವಳು ನನ್ನ ಮನಃಸ್ಥಿತಿಯನ್ನು ಅರ್ಥಮಾಡಿಕೊಂಡವಳಂತೆ ಹೇಳಿದಳು:

'ಕಾಗದ, ಟೆಲಿಗ್ರಾಂ– ಎರಡೂ ಇವೊತ್ತೇ ಬಂದವು. ಕಾಗದ ಬಂದದ್ದು ಎರಡುಗಂಟೇಲಿ. ಟೆಲಿಗ್ರಾಂ ಬಂದಾಗ ಐದೂವರೆ.'